**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 2992/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಶ |
| ತಂದೆಯ ಹೆಸರು | : | ಮಹದೇವ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪಿ.ಡಿ.ಓ, ಕಳಲೆ ಗ್ರಾಮ ಪಂಚಾಯಿತಿ |
| ವಾಸಸ್ಥಳ | : | ನಂಜನಗೂಡು ಟೌನ್. |

**ಸಾಕ್ಷಿಯನ್ನು ದಿನಾಂಕಃ 17.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 2019 ರಿಂದ 2021 ರವರೆಗೆ ಹುರಾ ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಹುಲ್ಲಹಳ್ಳಿ ಪೊಲೀಸ್ ಠಾಣೆಯವರ ಕೋರಿಕೆಯಂತೆ ಆಸ್ತಿ ಸಂಖ್ಯೆ -79 ಸಿದ್ದೇಗೌಡ ಬಿನ್ ಚಿಕ್ಕಂಡೆಗೌಡ ರವರ ಹೆಸರಿನಲ್ಲಿರುವ ಅಸೆಸ್ ಮೆಂಟ್ ರಿಜಿಸ್ಟರ್ ಎಕ್ಸ್ ಟ್ರಾಕ್ಟನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ, ವಕೀಲರಿಂದಃ**

ಪೊಲೀಸರು ಶಿವರಾಜುರವರ ಮನೆಯ ದಾಖಲೆಯನ್ನು ಕೊಡಿ ಎಂದು ಕೇಳಿದ್ದರು. ನಿಪಿ–4 ರಲ್ಲಿ ಶಿವರಾಜುರವರು ವಾಸ ಮಾಡುತ್ತಿದ್ದಾರೆಂದು ಬರೆದಿಲ್ಲ, ಆದರೆ ಮೂಲ ಮಾಲೀಕರ ಹೆಸರನ್ನು ನಮೂದಿಸಿ ಕೊಟ್ಟಿರುತ್ತೇನೆ. ಮೂಲ ಮಾಲೀಕರು ಮತ್ತು

ಶಿವರಾಜುರವರಿಗೆ ಯಾವ ರೀತಿ ಸಂಬಂಧ ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ನಾನು ಪೊಲೀಸರ ಕೋರಿಕೆಯ ಮೇರೆಗೆ ನೀಡಿರುತ್ತೇನೆ.

**ಮರು ವಿಚಾರಣೆ:** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**